ವಾದುದು ಹಾಗೂ ಕರ್ಮವು ಇಚ್ಛಾಪ್ರಧಾನವಾದುದು. ಆದರೆ **ವಿಚಾರ** ಮತ್ತು **ಇಚ್ಛೆ** ಎರಡೂ ಭಾವದ ಪ್ರಭಾವಕ್ಕೆ ಒಳಗಾಗುತ್ತವೆ. ಭಾವವು ಸಂಸ್ಕಾರಗಳ ವಶವರ್ತಿಯಾಗಿರುತ್ತದೆ. ಕರ್ಮದೊಡನೆ ಜ್ಞಾನವೂ ಸೇರಿಕೊಂಡಿದ್ದರೆ ಆ ಕರ್ಮವು 'ಕರ್ಮಯೋಗ'ವಾಗುತ್ತದೆ. ಇದರಿಂದ ಸಂಸ್ಕಾರಗಳು ಕ್ರಮೇಣ ದುರ್ಬಲಗೊಳ್ಳುತ್ತವೆ. ಇದರಿಂದ ಭಾವಶುದ್ಧಿಯುಂಟಾಗುತ್ತದೆ. ಆಗ ಭಾವವು ಶುದ್ಧಭಕ್ತಿಯಾಗಿ ವ್ಯಕ್ತವಾಗುತ್ತದೆ. ಅನಂತರ ಭಕ್ತಿ, ಜ್ಞಾನ ಮತ್ತು ಕರ್ಮಗಳು ಒಂದಾಗಿಬಿಡುತ್ತವೆ. ಈ ರೀತಿಯ ಸಮನ್ವಯದೃಷ್ಟಿ ಇರಬೇಕೆಂಬುದು ಶ್ರೀಕೃಷ್ಣನ ಒಟ್ಟು ಅಭಿಪ್ರಾಯ.

ಕರ್ಮವು ಜ್ಞಾನದಿಂದ ಒಡಗೂಡಿದ್ದರೆ, ಕರ್ಮದೊಡನೆ ಸೇರಿಕೊಂಡಿರುವ ಎಲ್ಲ ದೋಷಗಳನ್ನೂ ಜ್ಞಾನವು ನಿವಾರಿಸಿ ಅದನ್ನು ಪವಿತ್ರಗೊಳಿಸುತ್ತದೆ. ಕರ್ಮವನ್ನು ಮಾಡುವಾಗ ಅನೇಕ ದೋಷಗಳು ಆಗುವುದು ಸ್ವಾಭಾವಿಕ. ಕ್ರಮೇಣ ನಮಗರಿವಿಲ್ಲದಂತೆಯೇ ಅನೇಕ ಸ್ವಾರ್ಥೋದ್ದೇಶಗಳು, ಹೆಸರು, ಕೀರ್ತಿ ಮುಂತಾದವುಗಳು ಅದರೊಡನೆ ಸೇರಿಕೊಳ್ಳುತ್ತವೆ. ದೇಹವು ಶಕ್ತಿವಂತವಾಗಿದ್ದರೆ ಯಾವುದೇ ರೋಗಾಣುಗಳೂ ದೇಹವನ್ನು ಆಕ್ರಮಿಸಲಾರವು. ಜ್ಞಾನದಲ್ಲಿ ಅಂತಹ ಪವಿತ್ರತೆಯ ಶಕ್ತಿ ಇರುವುದರಿಂದಲೇ ಅದು ಎಲ್ಲವನ್ನೂ ಪವಿತ್ರಗೊಳಿಸುತ್ತದೆ. ಶ್ರೀಕೃಷ್ಣನು ಹೇಳುತ್ತಾನೆ:

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।**
**ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ॥**
**(೪:೩೮)**

“ಈ ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರವಸ್ತು ಯಾವುದೂ ಇಲ್ಲ. ಯೋಗದಿಂದ ಸಂಸಿದ್ಧಿಯನ್ನು ಪಡೆದವನು ಕಾಲಕ್ರಮದಲ್ಲಿ ಆ ಜ್ಞಾನವನ್ನು ತನ್ನಲ್ಲಿ ತಾನೇ ಹೊಂದುತ್ತಾನೆ.”

ಪ್ರತಿಯೊಂದು ಜ್ಞಾನವೂ ಪವಿತ್ರವಾದುದೇ. ವಸ್ತುವು ಅಪವಿತ್ರವಾಗಿರಬಹುದು. ಆದರೆ ಅದಕ್ಕೆ ಸಂಬಂಧಪಟ್ಟ ಜ್ಞಾನವು ಪವಿತ್ರವಾದುದು. ಹಣವು ಕೆಟ್ಟದ್ದಿರಬಹುದು, ಆದರೆ ಅರ್ಥಶಾಸ್ತ್ರ ಕೆಟ್ಟದ್ದಲ್ಲ, ಅದನ್ನು ಓದಿದವರೆಲ್ಲಾ ಹಣಕ್ಕೆ ವಶರಾಗುವುದಿಲ್ಲ. ಇದಕ್ಕೆ ಕಾರಣ ಎಲ್ಲ ಬಗೆಯ ಜ್ಞಾನವೂ ಆತ್ಮಜ್ಯೋತಿಯ ಪ್ರತಿಬಿಂಬವೇ. ನಮಗೆ ಜ್ಞಾನವುಂಟಾಗುವುದು ಚಿತ್ತವೃತ್ತಿಗಳ ಮೂಲಕ. ನಾವು ಒಂದು ಹೊರಗಿನ ವಸ್ತುವನ್ನು ನೋಡುವುದೆಂದರೆ, ಆ ವಸ್ತುವಿನ ಪ್ರತಿನಿಧಿರೂಪವಾದ ಮಾನಸಿಕ ವೃತ್ತಿಯನ್ನು ನೋಡುವುದು. ವಸ್ತುಗಳಿಗೆ ಸಂಬಂಧಿಸಿದ ಸಂವೇದನೆಗಳು ಇಂದ್ರಿಯಗಳ ಮೂಲಕ ಮನಸ್ಸಿಗೆ ಹೋಗಿ ತತ್ಸಂಬಂಧಿಯಾದ ವೃತ್ತಿಯನ್ನು ಮನಸ್ಸಿನಲ್ಲಿ ಉಂಟುಮಾಡುತ್ತವೆ. ನಾವು ಆ ವೃತ್ತಿಯನ್ನು ನೋಡಿ ವಸ್ತುವನ್ನು ನೋಡುತ್ತಿರುವುದಾಗಿ ತಿಳಿಯುತ್ತೇವೆ. ನಮಗುಂಟಾಗುವ ಎಲ್ಲ ಜ್ಞಾನವೂ ವೃತ್ತಿಜ್ಞಾನವೇ. ಈ ವೃತ್ತಿಯನ್ನು ಬೆಳಗುವುದು ಯಾವುದು? ಬಾಹ್ಯವಸ್ತುವನ್ನು ಬೆಳಗಲು ಹೊರಗಿನ ಬೆಳಕಿದೆ. ಈ ಆಂತರಿಕ ವೃತ್ತಿಯನ್ನು ಬೆಳಗುವ ಆಂತರಿಕ ಬೆಳಕು ಯಾವುದು? ಇದೇ ಆತ್ಮದ ಬೆಳಕು – ಪ್ರಜ್ಞಾಬೆಳಕು. ಈ ಬೆಳಕು ವೃತ್ತಿಗಳ ಮೂಲಕ ಪ್ರತಿಬಿಂಬಿತವಾದಾಗ ನಮಗೆ ಜ್ಞಾನವುಂಟಾಗುತ್ತದೆ. ಅಂದರೆ ನಿಜವಾದ ಜ್ಞಾನ ಆತ್ಮದ ಬೆಳಕೇ. ಬಾಹ್ಯವಸ್ತುಗಳನ್ನು ನೋಡುವಾಗ ಬೆಳಕು ವಸ್ತುಗಳ ಮೂಲಕ ಪ್ರತಿಬಿಂಬಿತವಾಗಿ ಕಣ್ಣನ್ನು ತಲುಪುತ್ತದೆ. ಅಂದರೆ ವಸ್ತುವನ್ನು ನೋಡುವುದೆಂದರೆ ಬೆಳಕನ್ನು ನೋಡುವುದೇ ಆಗಿರುತ್ತದೆ. ಹಾಗೆಯೇ 'ವೃತ್ತಿಜ್ಞಾನ'ವೆಂದರೆ ಆತ್ಮದ ಬೆಳಕನ್ನು ನೋಡುವುದೇ ಆಗಿದೆ. ಆದ್ದರಿಂದ ಎಲ್ಲ ಜ್ಞಾನಗಳ ಮೂಲಕವೂ ಆತ್ಮನೇ ಪ್ರಕಾಶಿಸುತ್ತಿರುವುದು. ಇದನ್ನೇ ಕೇನೋಪನಿಷತ್ತು ಹೀಗೆ ಹೇಳುತ್ತದೆ: **ಪ್ರತಿಬೋಧವಿದಿತಂ ಮತಂ ಅಮೃತತ್ವಂ ಹಿ ವಿಂದತೇ ॥** “ಯಾವಾಗ ಆತ್ಮವು ಪ್ರತಿಬೋಧದಲ್ಲಿಯೂ (ಪ್ರತಿಯೊಂದು ಬಗೆಯ ಅರಿವಿನಲ್ಲಿಯೂ, ಅನುಭವದಲ್ಲಿಯೂ) ತಿಳಿಯಲ್ಪಡುತ್ತದೆಯೋ ಆಗ ತಿಳಿದಂತಾಗುತ್ತದೆ; ಆಗ ವ್ಯಕ್ತಿಯು ಅಮೃತತ್ವವನ್ನು ಪಡೆಯುತ್ತಾನೆ”. ಆದ್ದರಿಂದಲೇ ಆತ್ಮವನ್ನು 'ಜ್ಞಾನಸ್ವರೂಪ' ಎಂದು ಕರೆದಿರುವುದು. ಸ್ವಾಮಿ ವಿವೇಕಾನಂದರು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: “ಪ್ರಕೃತಿಯಲ್ಲಿ ಜ್ಞಾನವೆಂಬುದಿಲ್ಲ, ಜ್ಞಾನವೆಲ್ಲವೂ ಮಾನವನ ಅಂತರಾತ್ಮನಿಂದ ಬರುವಂತಹದು.” ಇದರಿಂದಾಗಿಯೇ ಜ್ಞಾನವು ಅತ್ಯಂತ ಪವಿತ್ರವಾದುದು ಎಂದು ಹೇಳಿರುವುದು. ಜ್ಞಾನದ ಮಹಿಮೆಯನ್ನು ಕೊಂಡಾಡುತ್ತ ಶ್ರೀಕೃಷ್ಣನು ಹೇಳುತ್ತಾನೆ:

**ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥ (೪ : ೩೬)**

“ನೀನು ಎಲ್ಲ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ (ಸಮುದ್ರದ ಹಾಗೆ ಇರುವ), ಆ ಸಮಸ್ತ ಪಾಪವನ್ನೂ ಜ್ಞಾನವೆಂಬ ನಾವೆಯಿಂದ ದಾಟುತ್ತೀಯೆ.”

ಶ್ರೀರಾಮಕೃಷ್ಣರು ಹೇಳುವಂತೆ, ಕತ್ತಲಕೋಣೆಗೆ ಬೆಳಕು ಪ್ರವೇಶಿಸಿದ ಕೂಡಲೇ ಕತ್ತಲೆ ಸಂಪೂರ್ಣ ಮಾಯವಾಗುತ್ತದೆ, ಕ್ರಮೇಣ ಅಲ್ಲ. ಬೆಳಕಿನ ಪ್ರವೇಶಕ್ಕೆ ತಡೆಯನ್ನುಂಟುಮಾಡುವುದು ನಮ್ಮ ಅಹಂಕಾರ. ಶ್ರದ್ಧೆಯ ಮೂಲಕ ಈ ಅಹಂಕಾರವು ನಾಶವಾದರೆ ಭಗವದ್ಕೃಪೆಯು ಜ್ಞಾನಜ್ಯೋತಿಯ ರೂಪದಲ್ಲಿ ಪ್ರವೇಶಿಸುತ್ತದೆ. ವ್ಯಕ್ತಿಯು ಎಷ್ಟೇ ಧಾರ್ಮಿಕನಾಗಿದ್ದರೂ, ಎಷ್ಟೇ ಒಳ್ಳೆಯ ಜೀವನ ನಡೆಸುತ್ತಿದ್ದರೂ ಅವನು ಅಹಂಕಾರದಿಂದ ಕೂಡಿದ್ದರೆ ಜ್ಞಾನಕ್ಕೆ ಅಲ್ಲಿ ಪ್ರವೇಶವಿಲ್ಲ. ಶ್ರೀ ಗಿರೀಶಚಂದ್ರ ಘೋಷನು ಎಷ್ಟೇ ಪಾಪ ಮಾಡಿದ್ದರೂ, ಅವನಲ್ಲಿದ್ದ ಅಪಾರ ಶ್ರದ್ಧೆ ಅವನನ್ನು ಕಾಪಾಡಿತು. ಬೆಳ್ಳುಳ್ಳಿ ಹಾಕಿದ ಪದಾರ್ಥವನ್ನು ಬೇಯಿಸಿದ ಪಾತ್ರೆಯಲ್ಲಿರುವ ಬೆಳ್ಳುಳ್ಳಿ ವಾಸನೆ ಹೋಗದಿರುವಂತೆ, ತೀವ್ರ ಪ್ರಾಪಂಚಿಕರು ಎಷ್ಟೇ ಭಕ್ತರಾಗಿದ್ದರೂ ಪ್ರಾಪಂಚಿಕತೆಯ ವಾಸನೆ ಹೋಗುವುದಿಲ್ಲ ಎಂದು ಶ್ರೀರಾಮಕೃಷ್ಣರು ಹೇಳಿದ ಮಾತನ್ನು ಕೇಳಿ, ಗಿರೀಶನು ಒಂದು ದಿನ, “ಹಾಗಾದರೆ ಬೆಳ್ಳುಳ್ಳಿಯ ವಾಸನೆ ಯಾವತ್ತೂ ಹೋಗುವುದೇ ಇಲ್ಲವೇ?” ಎಂದು ಕೇಳಿದನು. ಅದಕ್ಕೆ ಶ್ರೀರಾಮಕೃಷ್ಣರು ಭರವಸೆಯನ್ನು ನೀಡಿದರು, “ಬೆಳ್ಳುಳ್ಳಿಯ ಪಾತ್ರೆಯನ್ನು ಚೆನ್ನಾಗಿ ಬೆಂಕಿಯಲ್ಲಿ ಕಾಯಿಸಿದರೆ ಆ ವಾಸನೆ ಹೊರಟುಹೋಗುತ್ತದೆ” ಎಂದು. ಇದೇ ರೀತಿ ಜ್ಞಾನಾಗ್ನಿಯಿಂದ ಎಲ್ಲ ಪ್ರಾಪಂಚಿಕತೆಯೂ ಹೊರಟುಹೋಗುತ್ತದೆ. ಆದ್ದರಿಂದ ಯಜ್ಞಗಳಲ್ಲೆಲ್ಲಾ ಜ್ಞಾನಯಜ್ಞವೇ ಸರ್ವಶ್ರೇಷ್ಠ ಯಜ್ಞ.